ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
https://raichuruniversity.ac.in **ಆಡಳಿತ ವಿಭಾಗ** registrarrur@gmail.com

ಕ್ರ.ಸಂ. ರಾವಿರಾ/ಆಡಳಿತ/ಸಿಂಡಿಕೇಟ್ ಸಭೆ/2022-23/ ದಿನಾಂಕ: 17/06/2022

ಗೆ
ಮಾನ್ಯ ಸಿಂಡಿಕೇಟ ಸದಸ್ಯರುಗಳು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

ಮಾನ್ಯರೇ,

ವಿಷಯ: ದಿನಾಂಕ: 17.06.2022ರಂದು ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡಾವಳಿಗಳು.

*****

ದಿನಾಂಕ: 17.06.2022ರಂದು ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡಾವಳಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ತಮ್ಮ ವಿಶ್ವಾಸಿ
17/6/22
ಪ್ರೊ. ವಿಶ್ವನಾಥ ಎಂ.,
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಅಡಕ: ನಡಾವಳಿಗಳು.

ಪ್ರತಿಗಳು :

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
3. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
6. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
7. ಉಪ-ಕುಲಸಚಿವರು, ಆಡಳಿತ/ವಿದ್ಯಾಮಂಡಲ/ಪರೀಕ್ಷಾ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
8. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
9. ಕಛೇರಿ ಕಡತಕ್ಕೆ.

## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ 17.06.2022 ರಂದು ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 1. | ಶ್ರೀ. ಶಿವಬಸಪ್ಪ ಮಾಲಿಪಾಟೀಲ | ಸಿಂಡಿಕೇಟ್ ಸದಸ್ಯರು |
| 2. | ಶ್ರೀ. ನಾಗೇಂದ್ರ ಪ್ರಸಾದ | ಸಿಂಡಿಕೇಟ್ ಸದಸ್ಯರು |
| 3. | ಶ್ರೀ ಮೋಹನ್ ಕುಮಟಾಕರ್ ಎಂ., | ಸಿಂಡಿಕೇಟ್ ಸದಸ್ಯರು |
| 4. | ಶ್ರೀ ಹೆಚ್.ಜಗದೀಶ್ | ಸಿಂಡಿಕೇಟ್ ಸದಸ್ಯರು |
| 5. | ಶ್ರೀಮತಿ ಕಾವೇರಿ ಕೇದಾರನಾಥ್ | ಸಿಂಡಿಕೇಟ್ ಸದಸ್ಯರು |
| 5. | ಶ್ರೀ ಸಂಜಯ್ ಕುಮಾರ್ ಮೂಥಾ | ಸಿಂಡಿಕೇಟ್ ಸದಸ್ಯರು |
| 6. | ಪ್ರೊ. ವೈ.ಎಂ.ಭಜಂತ್ರಿ | ಸಿಂಡಿಕೇಟ್ ಸದಸ್ಯರು |
| 7. | ಶ್ರೀ ಶಂಕರ ರೆಡ್ಡಿ ಜಿ. | ಸಿಂಡಿಕೇಟ್ ಸದಸ್ಯರು |
| 8. | ಪ್ರೊ. ಎಂ. ಯರಿಸ್ವಾಮಿ, ಕುಲಸಚಿವರು(ಮೌಲ್ಯಮಾಪನ) | ಸಿಂಡಿಕೇಟ್ ಸದಸ್ಯರು |
| 9. | ಪ್ರೊ. ವಿಶ್ವನಾಥ ಎಂ.ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಬವಾಯಿತು

| ಕಲಂ / ಐಟಂ ನಂ. | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 1. | ದಿನಾಂಕ 22.04.2022ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು | ನಡವಳಿಗಳನ್ನು ದೃಢೀಕರಿಸಿ ಅನುಮೋದಿಸಲಾಯಿತು. |
| 2. | ನೂತನವಾಗಿ ಸ್ಥಾಪಿತವಾದ ರಾಯಚೂರು ವಿಶ್ವವಿದ್ಯಾಲಯವನ್ನು ಅಧಿಕೃತವಾಗಿ ಉದ್ಘಾಟಿಸುವ ಕಾರ್ಯಕ್ರಮವನ್ನು ಆಯೋಜಿಸುವ ಕುರಿತು ರೂಪುರೇಷೆಗಳ ಚರ್ಚೆ | ವಿಶ್ವವಿದ್ಯಾಲಯದ ಅಧಿಕೃತ ಉದ್ಘಾಟನೆ ಕಾರ್ಯಕ್ರಮವನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು, ಉನ್ನತ ಶಿಕ್ಷಣ ಸಚಿವರು ಹಾಗೂ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಉಸ್ತುವಾರಿ ಸಚಿವರುಗಳನ್ನು ಬೇಟಿ ಮಾಡಿ ನಿಗದಿತ ದಿನಾಂಕವನ್ನು ಗೊತ್ತುಪಡಿಸಿ ಕಾರ್ಯಕ್ರಮವನ್ನು ಆಯೋಜಿಸಲು ತೀರ್ಮಾನಿಸಲಾಯಿತು. |
| 3 | ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ರಾಯಚೂರಿನಲ್ಲಿ ಕೆಲಸ ಮಾಡುತ್ತಿರುವ "ಗ್ರುಪ್ ಸಿ ಮತ್ತು ಡಿ" ಹೊರ ಗುತ್ತಿಗೆ ನೌಕರರ ಮುಂದುವರಿಕೆ ಮತ್ತು ವೇತನ ಪಾವತಿ ಮಾಡುವ ಕುರಿತು ಚರ್ಚೆ | ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ರಾಯಚೂರಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಒಟ್ಟು 23 ಸಿಬ್ಬಂದಿಗಳ ಪೈಕಿ 18 ಸಿಬ್ಬಂದಿಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು ಸದರಿ 18 ಸಿಬ್ಬಂದಿಗಳನ್ನು ಮಾನವಿಯತೆಯ ದೃಷ್ಟಿಯಿಂದ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ 56(1)ರ ಕಲಂ ಪ್ರಕಾರ ಮಾನ್ಯ ಕುಲಪತಿಗಳಿಗೆ ನೀಡಿರುವ ಅಧಿಕಾರವನ್ನು ಚಲಾಯಿಸಿ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸಲು ಸೂಚಿಸುವ ಕುರಿತು ತೀರ್ಮಾನಿಸಲಾಯಿತು ಹಾಗೂ ಅನಧೀಕೃತ ಗೈರು ಹಾಜರಾಗಿರುವ 05 ಸಿಬ್ಬಂದಿಗಳನ್ನು ಕೈಬಿಡಲು ನಿರ್ಣಯಿಸಲಾಯಿತು. |

| | | |
|---|---|---|
| 4 | ರಾಯಚೂರು ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ಹಾಗೂ ಕಟ್ಟಡ ನಿರ್ಮಾಣದ ವಿಭಾಗಕ್ಕೆ "ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000 ರ 56(1)" ರ ಅಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಸೇವೆಯನ್ನು ಪಡೆದಿರುವ ಹಿನ್ನೆಲೆಯಲ್ಲಿ ಸಿಂಡಿಕೇಟ್ ಅನುಮೋದನೆ ಕುರಿತು. | ಶ್ರೀ. ಪಂಪಾಪತಿ ಬಡಿಗೇರ, Foreman (Retired) in Civil Engineering Department of SLN Engineering College, Raichur ಇವರನ್ನು ರಾಯಚೂರು ವಿಶ್ವವಿದ್ಯಾಲಯ ಕಟ್ಟಡ ನಿರ್ಮಾಣ ಹಾಗೂ ಇಂಜಿನಿಯರಿಂಗ್ ವಿಭಾಗಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರೆಂದು 11 ತಿಂಗಳಿಗೆ ಅಥವಾ ಮುಂದಿನ ಆದೇಶದವರೆಗೆ ಗುತ್ತಿಗೆ ಆಧಾರದ ಮೇಲೆ ಇವರಿಗೆ ಮಾಸಿಕ 30,000/– ಸಂಚಿತ ವೇತನವನ್ನು ನಿಗದಿಪಡಿಸಿ ದಿನಾಂಕ: 01.04.2022 ರಿಂದ ಪೂರ್ವಾನ್ವಯವಾಗುವಂತೆ ನೇಮಕ ಮಾಡಿ ಆದೇಶಿಸಲಾದ ಆದೇಶವನ್ನು ಅನುಮೋದಿಸಲಾಯಿತು. |
| 5 | ಸರ್ಕಾರದಿಂದ ಮಂಜೂರಾದ 15 ಕೋಟಿ ರೂಪಾಯಿಗಳನ್ನು ವಿನಿಯೋಗಿಸಲು DPR (ವಿಸ್ತೃತ ಯೋಜನಾ ವರದಿ) ತಯಾರಿಸಿ, ಸರ್ಕಾರದ ಅನುಮೋದನೆ ಪಡೆದುಕೊಂಡು GEM/E-Tender ಸಂಗ್ರಹಣೆ ಹಾಗೂ ಕಟ್ಟಡ ಕಾಮಗಾರಿಗೆ ಟೆಂಡರ್ ಕರೆಯುವ ಕುರಿತು. | ಸರ್ಕಾರಕ್ಕೆ ಸಲ್ಲಿಸಿರುವ DPR (ವಿಸ್ತೃತ ಯೋಜನಾ ವರದಿ) ಸರ್ಕಾರದಿಂದ ಅನುಮೋದನೆಗೊಂಡ ನಂತರ ಆದೇಶದಲ್ಲಿರುವ ಕಾರ್ಯಗಳನ್ನು ನಿಯಮಾನುಸಾರ ಕಾರ್ಯಗತಗೊಳಸಲು ಅನುಮೋದಿಸಲಾಯಿತು. |
| 6 | ಸರ್ಕಾರದಿಂದ ಮಂಜೂರಾಗಿರುವ 01 ಕೋಟಿ ರೂಪಾಯಿಗಳ ಅಭಿವೃದ್ಧಿ ಅನುದಾನದಲ್ಲಿ ರಾಯಚೂರು ವಿಶ್ವವಿದ್ಯಾಲಯದಲ್ಲಿ E-Office (ವಿದ್ಯುನ್ಮಾನ ಕಾರ್ಯಲಯ) ಸ್ಥಾಪಿಸುವದು ಹಾಗೂ E-Office ಗೆ ಬೇಕಾಗುವ ಕಂಪ್ಯೂಟರ್, ಪ್ರಿಂಟರ್, ಲ್ಯಾಪಟಾಪ್ ಮತ್ತು LAN Networking ಹಾಗೂ ಪರೀಕ್ಷಾ ವಿಭಾಗಕ್ಕೆ ಅವಶ್ಯವಿರುವ ಕಂಪ್ಯೂಟರ್, ಪ್ರಿಂಟರ್, ಲ್ಯಾಪಟಾಪ್ ಹಾಗೂ ಇತರ ವಿದ್ಯುನ್ಮಾನ ಸಾಮಗ್ರಿಗಳನ್ನು GEM ಮುಖಾಂತರ ಖರೀದಿಸುವ ಕುರಿತು | ಸಭೆಯಲ್ಲಿ ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯಗಳಲ್ಲಿ E-Office (ವಿದ್ಯುನ್ಮಾನ ಕಾರ್ಯಲಯ) ನಿರ್ವಹಣೆಯನ್ನು ಸರ್ಕಾರವು ಕಡ್ಡಾಯವಾಗಿ ನಿರ್ವಹಿಸಲು ಆದೇಶಿಸಿರುವುದರಿಂದ ಇದಕ್ಕೆ ಬೇಕಾಗಿರುವ ತಂತ್ರಾಂಶ/ಯಂತ್ರಾಂಶ (Software/Hardware)ಗಳನ್ನು ಖರೀದಿಸಲು ಹಾಗೂ ಪರೀಕ್ಷಾ ವಿಭಾಗಕ್ಕೆ ಅವಶ್ಯಕವಾಗಿ ಬೇಕಾಗಿರುವ ವಿದ್ಯುನ್ಮಾನ ಉಪಕರಣಗಳು (Computers, Printers, Laptops, Xerox Machine, etc..) GEM ಮುಖಾಂತರ ಖರೀದಿಸಲು ಅನುಮೋದಿಸಲಾಯಿತು. |
| 7 | ಶ್ರೀ.ಶಂಕರ್ ರೆಡ್ಡಿ.ಜಿ. ಸಿಂಡಿಕೇಟ್ ಸದಸ್ಯರು ಹಾಗೂ ವಸತಿ ನಿಲಯದ ನವೀಕರಣ ಸಮಿತಿಯ ಅಧ್ಯಕ್ಷರು ಹಾಗೂ ಸಮಿತಿಯ ಸದಸ್ಯರುಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ವರದಿಯನುಸಾರ ವಸತಿ ನಿಲಯದ ರಿಪೇರಿ ಮತ್ತು ನವೀಕರಣ ಕಾರ್ಯವನ್ನು ಮತ್ತು GEM ಮುಖಾಂತರ ವಸತಿನಿಲಯಕ್ಕೆ ಪಿಠೋಪಕರಣಗಳನ್ನು ಖರೀದಿಸುವ ಕುರಿತು. | ಶ್ರೀ.ಶಂಕರ್ ರೆಡ್ಡಿ.ಜಿ. ಸಿಂಡಿಕೇಟ್ ಸದಸ್ಯರು ಹಾಗೂ ವಸತಿ ನಿಲಯದ ನವೀಕರಣ ಸಮಿತಿಯ ಅಧ್ಯಕ್ಷರು ಹಾಗೂ ಸಮಿತಿಯ ಸದಸ್ಯರುಗಳು ಸಲ್ಲಿರುವ ವರದಿಯನ್ನು ಸಭೆಯಲ್ಲಿ ಚರ್ಚಿಸಿ<br>ವಿಶ್ವವಿದ್ಯಾಲಯದಲ್ಲಿ ಆತಂರಿಕ ಸಂಪನ್ಮೂಲಗಳ ಸಂಗ್ರಹಕ್ಕೆ ಅನುಗುಣವಾಗಿ ವರದಿಯಲ್ಲಿರುವಂತೆ ಅವಶ್ಯಕತೆಗೆ ತಕ್ಕಂತೆ ಕಾರ್ಯಗಳನ್ನು ಸರ್ಕಾರ/ವಿಶ್ವವಿದ್ಯಾಲಯದ ನಿಯಮಾನುಸಾರ ಕೈಗೆತ್ತಿಕೊಳ್ಳಲು ಅನುಮೋದಿಸಲಾಯಿತು. |
| 8 | ಗುಲಬರ್ಗಾ ವಿಶ್ವವಿದ್ಯಾಲಯದ ಮೂರನೇ ಸೆಮಿಸ್ಟರ್ ಮತ್ತು ರಾಯಚೂರು ವಿಶ್ವವಿದ್ಯಾಲಯದಲ್ಲಿ ಒಂದ್ನನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಭೋಧನೆಯನ್ನು ಮಾಡುತ್ತಿರುವ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಮುಂದುವರಿಕೆಗೆ ಸಿಂಡಿಕೇಟ್ ಸದಸ್ಯರ ನೇತೃತ್ವದಲ್ಲಿ ರಚಿಸಿರುವ ಉಪ ಸಮಿತಿಯು ಸಲ್ಲಿಸಿದ ವರದಿಯ ಕುರಿತು ಚರ್ಚೆ ಹಾಗೂ ಅವರಿಗೆ ವೇತನ ಪಾವತಿಸುವ ಕುರಿತು. | ಸಿಂಡಿಕೇಟ್ ಉಪ ಸಮಿತಿಯ ಅಧ್ಯಕ್ಷರಾದ ಶ್ರೀ. ಶಿವಬಸಪ್ಪ ಮಾಲಿ ಪಾಟೀಲ್ ಹಾಗೂ ಸದಸ್ಯರುಗಳಾದ ಪ್ರೊ. ವೈ.ಯಂ.ಭಜಂತ್ರಿ, ಪ್ರೊ. ಪಿ. ಭಾಸ್ಕರ್ ಸಲ್ಲಿಸಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಹಾಗೂ ಚರ್ಚಿಸಿ, ಸಮಿತಿ ವರದಿಯನ್ನು ಅಂಗೀಕರಿಸಿ ಸರ್ಕಾರದ ನಿರ್ದೇಶನದಂತೆ ಹಾಗೂ ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಕಾರ್ಯಭಾರದ ಪ್ರಕಾರ ಅತಿಥಿ ಉಪನ್ಯಾಸಕರಿಗೆ ಆದೇಶವನ್ನು ನೀಡಿ ವಿಶ್ವವಿದ್ಯಾಲಯದ ಜೊತೆಗೆ ಹೆಚ್ಚುವರಿಯಾಗಿ ಬೇರೆ ಖಾಸಗಿ ಕಾಲೇಜುಗಳು ಹಾಗೂ ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಪರಿಗಣಿಸಬಾರದೆಂದು ಹಾಗೂ ಎರಡನೇ ಸೆಮಿಸ್ಟರ್‌ನ ವಿವಿಧ ಅಧ್ಯಯನ ವಿಭಾಗಗಳ ಕಾರ್ಯಭಾರದ ಪ್ರಕಾರ ಖಾಲಿ ಇರುವ ಅತಿಥಿ ಉಪನ್ಯಾಸಕರನ್ನು ವಾಕ್–ಇನ್–ಸಂದರ್ಶನದ ಮೂಲಕ ಸಂದರ್ಶನ ಮಾಡಿ ನಾಲ್ಕು ತಿಂಗಳುಗಳ ಮಟ್ಟಿಗೆ ಅಥವಾ ಎರಡನೇ ಸಮಿಸ್ಟರ್‌ನ ತರಗತಿಗಳು |

| | | |
|---|---|---|
| | | ಅಂತ್ಯಗೊಳ್ಳುವವರೆಗೆ ಆದೇಶ ನೀಡಲು ಅನುಮೋದಿಸಲಾಯಿತು. ಮುಂದುವರೆದು ಅತಿಥಿ ಉಪನ್ಯಾಸಕರಿಗೆ ಗುಲಬರ್ಗಾ ವಿಶ್ವವಿದ್ಯಾಲಯವು ನೀಡುತ್ತಿರುವ ಗೌರವಧನವನ್ನು ಯಥಾವತ್ತಾಗಿ ರಾಯಚೂರು ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರಿಗೆ ನೀಡಲು ಅನುಮೋದಿಸಲಾಯಿತು. |
| 9 | ರಾಯಚೂರು ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಹೆಚ್ಚಿನ ಅನುದಾನವನ್ನು ತರಲು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರನ್ನು ಬೇಟಿಮಾಡಲು ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರುಗಳನ್ನೊಳಗೊಂಡ ನಿಯೋಗವನ್ನು ಕಳುಹಿಸಿಕೊಡುವ ಕುರಿತು ಚರ್ಚೆ | 1. ವಿಶ್ವವಿದ್ಯಾಲಯದ ಸ್ಥಳಿಯ 04 ಜನ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯನ್ನು ಶ್ರೀ. ಶಿವಬಸಪ್ಪ ಮಾಲಿಪಾಟೀಲರವರ ಅಧ್ಯಕ್ಷತೆಯಲ್ಲಿ ರಚಿಸಿ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಶಾಸಕರು, ಸಂಸದರು ಹಾಗೂ ಉಸ್ತುವಾರಿ ಸಚಿವರುಗಳನ್ನು ಬೇಟಿ ಮಾಡುವುದು<br>2. ವಿಶ್ವವಿದ್ಯಾಲಯದ ಎಲ್ಲಾ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್‌ನ ಸದಸ್ಯರುಗಳನ್ನೊಳಗೊಂಡ ನಿಯೋಗವನ್ನು ತೆಗೆದುಕೊಂಡು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರುಗಳನ್ನು ಬೇಟಿ ಮಾಡಿ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಅನುದಾನವನ್ನು ತರುವ ಬಗ್ಗೆ ಪ್ರಯತ್ನಿಸಲು ಸಭೆಯಲ್ಲಿ ತೀರ್ಮಾನ ಮಾಡಲಾಯಿತು. |
| 10 | CSR ನಿಧಿ ಸಂಗ್ರಹಣೆಯ ಅನುದಾನವನ್ನು ರಾಯಚೂರು ವಿಶ್ವವಿದ್ಯಾಲಯಕ್ಕೆ ಮಂಜೂರಿಸಲು ಸಿಂಡಿಕೇಟ್ ಮತ್ತು ವಿದ್ಯಾವಿಷಯಕ್ ಪರಿಷತ್ ಸದಸ್ಯರುಗಳ ನಿಯೋಗವನ್ನು ರಚಿಸುವ ಕುರಿತು | ಐಟಂ ಸಂಖ್ಯೆ 09 ರಲ್ಲಿ ನಿರ್ಣಯವನ್ನೇ ಇಲ್ಲಿಯೂ ಮುಂದುವರೆಸಲು ತೀರ್ಮಾನಿಸಲಾಯಿತು ಹಾಗೂ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳು ತಮ್ಮ ತಮ್ಮ ಪ್ರಯತ್ನಗಳಿಗನುಸಾರ ಬೇರೆ ಬೇರೆ ಮೂಲಗಳಿಂದ ಅನುದಾನುವನ್ನು ತರಲು ಕೂಡ ಪ್ರಯತ್ನಿಸಬೇಕೆಂದು ತೀರ್ಮಾನಿಸಲಾಯಿತು. |
| 11 | ರಾಯಚೂರ ವಿಶ್ವವಿದ್ಯಾಲಯದಲ್ಲಿಯ ವಿದ್ಯಾರ್ಥಿಗಳಿಗೆ ಹಾಗೂ ಬೋಧಕ/ಬೋಧಕೇತರ ಸಿಬ್ಬಂದಿಗಳ ವೈದ್ಯಕೀಯ ತಪಾಸಣೆಗೆ ಭೇಟಿ ನೀಡುವ ವೈದ್ಯರ (Visiting Doctor/Physician) ನ್ನು ನೇಮಿಸುವ ಕುರಿತು. | ಈ ಕೆಳಗಿನ ಒಟ್ಟು ನಾಲ್ಕು ಜನ ಚಿಕಿತ್ಸಕ ವೈದ್ಯರನ್ನು (Physicians) ವಿಶ್ವವಿದ್ಯಾಲಯವು ವೈದ್ಯಕೀಯ ತಪಾಸಣೆಗೆ ಪರಿಗಣಿಸಲು ಸಭೆ ಅನುಮೋದಿಸಲಾಯಿತು.<br>1. ಡಾ. ರಾಮಪ್ಪ<br>2. ಡಾ. ಅನೀಲ ಗುಮಾಸ್ತೆ<br>3. ಡಾ. ಪ್ರವೀಣ ಬದ್ರಿ<br>4. ಡಾ. ಮೈತ್ರಿ ಮಂಜುನಾಥ ಎಂ.,<br>ಮುಂದುವರೆದು, ಸದರಿ ವೈದ್ಯರುಗಳು ವಾರಕ್ಕೆ ಮೂರು ಬಾರಿಯಂತೆ ತಿಂಗಳಿಗೆ ಕನಿಷ್ಟ 12 ಬಾರಿ ವಿಶ್ವವಿದ್ಯಾಲಯವು ನಿಗದಿ ಪಡಿಸಿದ ಸಮಯದಲ್ಲಿ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಲು ಒಪ್ಪಿಕೊಂಡಲ್ಲಿ, ಸದರಿಯವರಿಗೆ ಪ್ರತಿ ಬೇಟಿಗೆ ರೂ. 750/- ರಂತೆ ಗೌರವ ಧನವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| 12 | ರಾಯಚೂರ ವಿಶ್ವವಿದ್ಯಾಲಯದಲ್ಲಿಯ ವಿದ್ಯಾರ್ಥಿಗಳಿಗೆ ಹಾಗೂ ಬೋಧಕ/ಬೋಧಕೇತರ ಸಿಬ್ಬಂದಿಗಳ ಮನೋವೈದ್ಯಕೀಯ ತಪಾಸಣೆಗೆ ಭೇಟಿ ನೀಡುವ ಸಲಹಾ-ಮನೋವೈದ್ಯರನ್ನು (Visiting Consultant Psychiatrist) ನೇಮಿಸುವ ಕುರಿತು. | ಈ ಕೆಳಗಿನ ಒಟ್ಟು ಇಬ್ಬರು ಸಲಹಾ-ಮನೋವೈದ್ಯರನ್ನು (Visiting Consultant Psychiatrist) ವಿಶ್ವವಿದ್ಯಾಲಯವು ಮನೋವೈದ್ಯಕೀಯ ತಪಾಸಣೆಗೆ ಪರಿಗಣಿಸಲು ಸಭೆ ಅನುಮೋದಿಸಲಾಯಿತು.<br>1. ಡಾ. ಸುನೀಲ ಕುಮಾರ – Psychiatrist<br>2. ಡಾ. ಸಂಜನಾ – Psychiatrist<br>ಮುಂದುವರೆದು, ಸದರಿ ವೈದ್ಯರುಗಳು ವಾರಕ್ಕೆ ಮೂರು ಬಾರಿಯಂತೆ ತಿಂಗಳಿಗೆ ಕನಿಷ್ಟ 12 ಬಾರಿ ವಿಶ್ವವಿದ್ಯಾಲಯವು ನಿಗದಿ ಪಡಿಸಿದ ಸಮಯದಲ್ಲಿ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಲು ಒಪ್ಪಿಕೊಂಡಲ್ಲಿ, ಸದರಿಯವರಿಗೆ ಪ್ರತಿ ಬೇಟಿಗೆ ರೂ. 750/- ರಂತೆ ಗೌರವ ಧನವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |

| | | |
|---|---|---|
| 13 | ರಾಯಚೂರು ವಿಶ್ವವಿದ್ಯಾಲಯದ ವಿಜ್ಞಾನ ಅಧ್ಯಯನ ವಿಭಾಗಗಳ ಪ್ರಯೋಗಾಲಯಗಳಿಗೆ ವೈಜ್ಞಾನಿಕ ಉಪಕರಣಗಳನ್ನು ಖರೀದಿಸುವ ಕುರಿತು. | ವಿಜ್ಞಾನ ಅಧ್ಯಯನ ವಿಭಾಗಗಳ ಪ್ರಯೋಗಾಲಯಗಳಿಗೆ ಅವಶ್ಯಕವಾಗಿ ಬೇಕಾಗಿರುವ ವೈಜ್ಞಾನಿಕ ಉಪಕರಣಗಳನ್ನು ಖರೀದಿಯನ್ನು E-Tender ಮುಖಾಂತರ ನಡೆಸಿರುವುದನ್ನು ಅನುಮೋದಿಸಲಾಯಿತು. |
| 14 | ರಾಯಚೂರು ವಿಶ್ವವಿದ್ಯಾಲಯದ ಅಧೀನಕ್ಕೊಳಪಡುವ ಮಹಾವಿದ್ಯಾಲಯಗಳ 2022–23ನೇ ಸಾಲಿನ ಸಂಲಗ್ನತೆ/ಸಂಯೋಜನೆ ಕುರಿತು (Affiliation 2022-23) | ಸಂಲಗ್ನತೆ/ಸಂಯೋಜನೆಗೆ ಸಂಬಂಧಿಸಿದಂತೆ, ಸರ್ಕಾರದ ಮಾರ್ಗಸೂಚಿಗಳು ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಕ್ರಮ ಜರುಗಿಸಲು ಸಭೆಯಲ್ಲಿ ಅನುಮೋದಿಸಲಾಯಿತು. |
| 15 | ರಾಯಚೂರು ವಿಶ್ವವಿದ್ಯಾಲಯದ 2021–22ನೇ ಸಾಲಿನ ಸ್ನಾತಕ ಪದವಿ ಪರೀಕ್ಷೆಗಳ ಪರೀಕ್ಷಾ ಕೇಂದ್ರಗಳ ಕುರಿತು | ಗುಲಬರ್ಗಾ ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಗಳನ್ನು ಯತಾವತ್ತಾಗಿ ರಾಯಚೂರು ವಿಶ್ವವಿದ್ಯಾಲಯವೂ ಕೂಡಾ ಮುಂದುವರೆಸಲು ತೀರ್ಮಾನಿಲಾಯಿತು ಮತ್ತು ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು (ಮೌಲ್ಯಮಾಪನ) ಗಳ ಪ್ರದತ್ತವಾದ ಅಧಿಕಾರವನ್ನು ಚಲಾಯಿತಿ ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸದಂತೆ ನಿರ್ದಾರವನ್ನು ತೆಗೆದುಕೊಳ್ಳಲು ಅನುಮೋದಿಸಲಾಯಿತು. |

(ಪ್ರೊ. ವಿಶ್ವನಾಥ ಎಂ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ,ರಾಯಚೂರು

(ಪ್ರೊ. ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ,ರಾಯಚೂರು